# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ :8** **ತಿಂಗಳು : ಫೆಬ್ರವರಿ** **ವಿಷಯ : ದ್ವಿತೀಯ ಭಾಷೆ–ಕನ್ನಡ**

| ಕ್ರ.ಸಂ | ತಿಂಗಳು / ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಫೆಬ್ರವರಿ** ಮೊದಲನೆಯ ವಾರ | **ಗದ್ಯ : ಒಂದು ಮರದ ಬೆಲೆ**<br>• ಪರಿಸರ ಸಂರಕ್ಷಣೆಯ ಮಹತ್ವವನ್ನು ಅರಿಯುವರು . | • ನೀರಿನ ಸಂರಕ್ಷಣೆ, ಅರಣ್ಯ ರಕ್ಷಣೆ, ಹಸಿರು ಪರಿಸರ, ವಾಯುಮಾಲಿನ್ಯದ ಪರಿಣಾಮಗಳು, ನಮ್ಮ ಪರಿಸರ ಮುಂತಾದ ಪರಿಸರಕ್ಕೆ ಸಂಬಂಧಿಸಿದ ವಿಷಯಗಳನ್ನು ನೀಡಿ ಮಕ್ಕಳಿಗೆ ಆಶುಭಾಷಣ ಚಟುವಟಿಕೆ ಮಾಡಿಸುವುದು.<br>• ಮರಗಳಿಂದ ಸಕಲ ಜೀವಿಗಳಿಗೆ ಆಗುವ ಉಪಯೋಗಗಳನ್ನು ಪಟ್ಟಿ ಮಾಡಿಸುವುದು. | |
| | | • ಪ್ರಸಿದ್ಧವಾದ ಅಂಕಣ ಬರೆಹಗಳನ್ನು ಪರಿಚಯಿಸುವುದು . | • ಪತ್ರಿಕೆಗಳಲ್ಲಿ ಬರುವ ವಿವಿಧ ಲೇಖಕರ ಅಂಕಣ ಬರೆಹಗಳನ್ನು ಸಂಗ್ರಹಿಸುವ ಚಟುವಟಿಕೆ ಮಾಡಿಸುವುದು .<br>• ಗುರುರಾಜ ಕರ್ಜಗಿ ರಚಿಸಿರುವ ಕರುಣಾಳು ಬಾ ಬೆಳಕೆ ಅಂಕಣ ಬರೆಹದ ವಿಚಾರಗಳನ್ನು ಓದಿಸುವುದು . | |
| | | • ಅಂಕಣಕಾರ ಹಾ.ಮಾ.ನಾಯಕರವರ ಪರಿಚಯ ಮಾಡಿಕೊಳ್ಳುವರು. | • ಅಂಕಣಕಾರ ಹಾ.ಮಾ.ನಾಯಕರಿಗೆ ಸಂಬಂಧಿಸಿದ ವಿಚಾರಗಳನ್ನು ಒಬ್ಬ ವಿದ್ಯಾರ್ಥಿಯಿಂದ ಓದಿಸುವುದು. ಉಳಿದವರು ಆಲಿಸಿ ತಮ್ಮದೇ ವಾಕ್ಯಗಳಲ್ಲಿ ಹಾ.ಮಾ.ನಾಯಕರ ಪರಿಚಯವನ್ನು ಬರೆಯಲು ತಿಳಿಸುವುದು. ನಂತರ ಓದಿಸುವುದು. | |

| | | | | |
|---|---|---|---|---|
| | **ಫೆಬ್ರವರಿ**<br>ಎರಡನೆಯ ವಾರ | • ಅಮೆರಿಕಾದ ಜನರಲ್ಲಿ ಮರಗಳ ಸಂರಕ್ಷಣೆ ಕುರಿತು ಇರುವ ಅರಿವು ಹಾಗೂ ಕಾಳಜಿಯನ್ನು ತಿಳಿಯುವರು. | • ಅಮೆರಿಕಾದ ಟೆಕ್ಸಸ್ ರಾಜ್ಯದ ಹೌಸ್ಟನ್ ನಗರದಲ್ಲಿ ಮರದ ರಕ್ಷಣೆಗೆ ಜನರು ತೋರಿದ ಪ್ರತಿಕ್ರಿಯೆಯನ್ನು ಕುರಿತು ಪ್ರಶ್ನೋತ್ತರ ಚಟುವಟಿಕೆ ಮೂಲಕ ವಿವರಿಸುವುದು. | |
| | | • ಭಾರತದಲ್ಲಿ ಮರಗಳ ಬಗ್ಗೆ ಜನರು ಹೊಂದಿರುವ ನಿರ್ಲಕ್ಷ್ಯ ಭಾವನೆಯನ್ನು ತಿಳಿಯುವರು. | • ಬೆಂಗಳೂರು ಮಹಾನಗರದಲ್ಲಿ ಗಣ್ಯರೊಬ್ಬರು ಸ್ವಹಿತಾಸಕ್ತಿಗಾಗಿ ಮರವನ್ನು ಕತ್ತರಿಸಲು ಮುಂದಾದ ಪ್ರಸಂಗವನ್ನು ವಿವರಿಸುವುದು. | |
| | | • ಮರಗಳ ರಕ್ಷಣೆಯ ಕುರಿತು ಅಮೆರಿಕಾ ಮತ್ತು ಭಾರತದ ಜನರಲ್ಲಿರುವ ಭಿನ್ನ ದೃಷ್ಟಿಕೋನವನ್ನು ತಿಳಿಯುವರು. | • ಮರಗಳ ರಕ್ಷಣೆಯ ಕುರಿತು ಅಮೆರಿಕಾ ಮತ್ತು ಭಾರತದ ಜನರ ಭಿನ್ನ ದೃಷ್ಟಿಕೋನವನ್ನು ಕುರಿತು ತಮ್ಮ ಅನುಭವದ ಹಿನ್ನೆಲೆಯಲ್ಲಿ ಚರ್ಚಿಸಲು ತಿಳಿಸುವುದು. | • ಚರ್ಚೆಯ ಅಂಶಗಳನ್ನು ಪಟ್ಟಿಮಾಡಿಸುವುದು . |
| | | • ಆರೋಗ್ಯವಂತ ಮರವೊಂದರ ಬೆಲೆಯನ್ನು ತಿಳಿಯುವುದು<br>• ಸರಳ ಭಾಷಾಂಶಗಳನ್ನು ಅರಿಯುವುದು | • ಲೇಖಕರ ಲೆಕ್ಕಾಚಾರದಲ್ಲಿ ಆರೋಗ್ಯವಂತ ಮರವೊಂದರ ಬೆಲೆಯನ್ನು ಪರಿಚಯಿಸುವುದು.<br>• ಅಭ್ಯಾಸ ಹಾಳೆಯ ಮೂಲಕ ಪಾಠದಲ್ಲಿ ಬಳಕೆಯಾಗಿರುವ ತತ್ಸಮ ತದ್ಭವ, ವಿರುದ್ಧಾರ್ಥಕ ಪದಗಳು, ಸಂಧಿ ಪದಗಳನ್ನು ಪರಿಚಯಿಸುವುದು. **(ಅಭ್ಯಾಸ ಹಾಳೆ–01)** | |
| | **ಫೆಬ್ರವರಿ**<br>ಮೂರನೆಯ ವಾರ | **ಪದ್ಯ : ಗೌರವಿಸು ಜೀವನವ**<br>• ಬದುಕನ್ನು ಆನಂದಿಸುವ ಬಗೆಯನ್ನು ಅರಿಯುವುದು | • ಬದುಕಿನಲ್ಲಿ ನಾವು ಹೊಂದಿರಬೇಕಾದ ಮೌಲ್ಯಗಳನ್ನು ಪಟ್ಟಿ ಮಾಡಿಸುವುದು.<br>• ನಮ್ಮ ಬದುಕು ಸದಾ ನೆಮ್ಮದಿ ಸಂತೋಷದಿಂದ ಕೂಡಿರಲು ಅಗತ್ಯವಾದ ಅಂಶಗಳ ಬಗ್ಗೆ ಪ್ರಶ್ನೋತ್ತರ ಚಟುವಟಿಕೆ ಮೂಲಕ ಚರ್ಚಿಸುವುದು. | |

| | | | | |
|---|---|---|---|---|
| | | | • ಡಿವಿಜಿಯವರ ಕಗ್ಗ ಸಂಗ್ರಹಿಸುವುದು. **(ಅಭ್ಯಾಸ ಹಾಳೆ – 02)** | |
| | | • ಸೂಕ್ತ ಸ್ವರಭಾರಗಳೊಂದಿಗೆ ಓದುವ ಕೌಶಲ ಬೆಳೆಸಿಕೊಳ್ಳುವರು . | • ಗೌರವಿಸು ಜೀವನವ ಪದ್ಯದಲ್ಲಿ ಇರುವ ಪಾಠ ಪ್ರವೇಶ ಭಾಗವನ್ನು ಮಕ್ಕಳು ಸ್ಪಷ್ಟವಾಗಿ ತಪ್ಪಿಲ್ಲದೆ ಓದುವಂತೆ ಉತ್ತೇಜಿಸುವುದು. | |
| | | • ಕವಿ ಡಿವಿಜಿಯವರ ಪರಿಚಯ ಮಾಡಿಕೊಳ್ಳುವರು.<br>• ವಾಕ್ಯ ರಚನಾ ಕೌಶಲ ಬೆಳೆಸಿಕೊಳ್ಳುವರು. | • ಕವಿ ಪರಿಚಯ ಭಾಗವನ್ನು ಮೌನವಾಗಿ ಓದಿಕೊಳ್ಳುವಂತೆ ತಿಳಿಸುವುದು.<br>• ಓದಿದ ಅಂಶಗಳನ್ನು ಗ್ರಹಿಸಿ ಕವಿಯ ಕಾಲ, ಸ್ಥಳ, ಕೃತಿ, ಪ್ರಶಸ್ತಿಗಳನ್ನು ವಾಕ್ಯ ರೂಪದಲ್ಲಿ ಬರೆಯುವಂತೆ ಪ್ರೇರೇಪಿಸುವುದು<br>• ಪದ್ಯವನ್ನು ಅರ್ಥಪೂರ್ಣವಾಗಿ ವಾಚನ ಮಾಡಿಸುವುದು | ಕಂಠಪಾಠ ಪದ್ಯಭಾಗವನ್ನು ಕಲಿತು ಬರೆಯುವಂತೆ ಸೂಚಿಸುವುದು. |
| | **ಫೆಬ್ರವರಿ** ನಾಲ್ಕನೆಯ ವಾರ | • ಪದ್ಯಭಾಗದ ಭಾವಾರ್ಥವನ್ನು ಅರ್ಥೈಸಿಕೊಳ್ಳುವರು. | • ಜೀವನವನ್ನು ಗೌರವಿಸುವ ಬಗೆ, ನಮ್ಮ ಗುಣವನ್ನು ನಿರ್ಧರಿಸುವ ಅಂಶಗಳು, ಜೀವನಾನುಭವ ಹೊಂದುವ ಬಗೆ, ಜೀವನದ ಪ್ರತಿ ಕ್ಷಣದಲ್ಲೂ ಹೊಸತನ ತುಂಬುವ ರೀತಿಯ ಕುರಿತು ಡಿವಿಜಿಯವರ ಕವಿತೆಯಲ್ಲಿ ಸಿಗುವ ವಿಚಾರಗಳನ್ನು ಪ್ರಶ್ನೋತ್ತರ ಚಟುವಟಿಕೆಯ ಮೂಲಕ ಅರ್ಥ ಮಾಡಿಕೊಳ್ಳುವುದು.<br>• ವಿದ್ಯಾರ್ಥಿಗಳಿಂದ ಪದ್ಯಭಾಗದ ಭಾವಾರ್ಥವನ್ನು ಬರೆಸುವುದು. | |

| | | | | |
|---|---|---|---|---|
| | | • ಸರಳ ವ್ಯಾಕರಣಾಂಶಗಳನ್ನು ತಿಳಿಯುವರು. | • ವಿರುದ್ಧಾರ್ಥಕ ಪದಗಳು, ಪದಗಳನ್ನು ಬಿಡಿಸಿ ಸಂಧಿ ಹೆಸರಿಸುವುದು ಮುಂತಾದ ಸರಳ ವ್ಯಾಕರಣಾಂಶಗಳನ್ನು ಅಭ್ಯಾಸ ಹಾಳೆಯ ಮೂಲಕ ಪರಿಚಯಿಸುವುದು.<br>**(ಅಭ್ಯಾಸ ಹಾಳೆ – 03)** | |

## ಅಭ್ಯಾಸ ಹಾಳೆ – 01

## ಒಂದು ಮರದ ಬೆಲೆ

➤ **ಈ ಕೆಳಗಿನ ತತ್ಸಮ-ತದ್ಭವ ಪದಗಳನ್ನು ಮಾದರಿಯಂತೆ ಹೊಂದಿಸಿ ಬರೆಯಿರಿ**

| ವರ್ಷ | ಕಬ್ಬ | ವರ್ಷ – ವರುಷ |
|---|---|---|
| ದೃಷ್ಟಿ | ಆಸರೆ | |
| ಆಶ್ಚರ್ಯ | ವರುಷ | |
| ಆಶ್ರಯ | ತಾಣ | |
| ಕಾರ್ಯ | ದಿಟ್ಟಿ | |
| ಕಾವ್ಯ | ಅಚ್ಚರಿ | |
| ಧ್ವನಿ | ಕಜ್ಜ | |
| ಸ್ಥಾನ | ದನಿ | |

➤ **ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

| ಮಾದರಿ : ಬಹಿರಂಗ × ಅಂತರಂಗ | | | | |
|---|---|---|---|---|
| ನಿಧಾನ | | | ಆರೋಗ್ಯ | |
| ಉಳಿಸು | | | ಆಸಕ್ತಿ | |
| ಅಪರಾಧಿ | | | ಅಗತ್ಯ | |
| ಪ್ರತ್ಯಕ್ಷ | | | ಆಶ್ರಯ | |

➤ **ಮಾದರಿಯಂತೆ ಪದಗಳನ್ನು ಬಿಡಿಸಿ ಬರೆಯಿರಿ.**

| ಮಾದರಿ : ದೀರ್ಘಾಯಸ್ಸು | ದೀರ್ಘ + ಆಯಸ್ಸು |
|---|---|
| ಪತ್ರಗಳನ್ನಿಡು | |
| ಸಾವಿರಾರು | |
| ಶುಭಾಶಯ | |
| ಮರವೊಂದು | |
| ವಿಜ್ಞಾನಿಯೊಬ್ಬ | |
| ಪ್ರವಾಹವನ್ನು | |
| ಮಾತ್ರವಲ್ಲ | |
| ಲಭಿಸಲೆಂದು | |

## ಅಭ್ಯಾಸ ಹಾಳೆ – 02

## ಗೌರವಿಸು ಜೀವನವ

- ಡಿವಿಜಿಯವರು ರಚಿಸಿರುವ ಯಾವುದಾದರೂ 3 ಪ್ರಸಿದ್ಧ ಕಗ್ಗಗಳನ್ನು ಮಾದರಿಯಂತೆ ಸಂಗ್ರಹಿಸಿ ಬರೆಯಿರಿ .

### ಡಿವಿಜಿಯವರ ಮಾದರಿ ಕಗ್ಗ ಸಂಗ್ರಹ

ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು
ಗುರುತಿಸೊಳಿತಿರುವುದನು ಕೇಡುಗಳ ನಡುವೆ
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು
ಹರುಷಕದೆ ದಾರಿಯೆಲೊ – ಮಂಕುತಿಮ್ಮ

## ಅಭ್ಯಾಸ ಹಾಳೆ –03

## ಗೌರವಿಸು ಜೀವನವ

➢ **ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

| **ಮಾದರಿ : ಗೌರವ × ಅಗೌರವ** | | | | |
|---|---|---|---|---|
| ಪುಣ್ಯ | | | ಮೃತ್ಯು | |
| ಸಮ | | | ಭೇದ | |
| ವಿವೇಕ | | | ಚೇತನ | |

➢ **ಮಾದರಿಯಂತೆ ಪದಗಳನ್ನು ಬಿಡಿಸಿ ಬರೆಯಿರಿ**

| **ಮಾದರಿ : ಹಸಿರೆಲ್ಲಿ** | **ಹಸಿರು + ಎಲ್ಲಿ** |
|---|---|
| ಕಾರಣವೊಂದೇ | |
| ಭೇದವೆಣಿಸು | |
| ಆತ್ಮೋನ್ನತಿ | |
| ಹೂದೋಟ | |
| ಬ್ರಹ್ಮಾನುಭವಿ | |
| ಭಾಸ್ಕರನನುಗ್ರಹ | |
| ಶುದ್ಧವಾಗಿ | |
| ಶಾಶ್ವತವಾಗು | |

➢ **ಕೆಳಗೆ ನೀಡಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

**ಮಾದರಿ :**

**ಗೌರವಿಸು – ನಾವು ಗುರು ಹಿರಿಯರನ್ನು ಸದಾ ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು.**

1. ಗುಣ –

2. ಹೂದೋಟ –

3.ಅನುಗ್ರಹ –

4.ಮೌನ –